# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 110/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಸಂದೇಶ ಕೆ.ಎಸ್. | | *ಪ್ರಮಾಣ ಮಾಡಿಸಿದ ದಿನಾಂಕಃ* |
| ತಂದೆ ಹೆಸರು | ಃ ಸಿದ್ದಲಿಂಗ ದೇವರು | | **07.03.2020** |
| ವಯಸ್ಸು | ಃ 32 ವರ್ಷ | | |
| ವೃತ್ತಿ | ಃ ದ್ವಿತೀಯ ದರ್ಜೆ ಸಹಾಯಕ, ಇ.ಎಸ್.ಐ. ಆಸ್ಪತ್ರೆ, ಮೈಸೂರು | **ಪ್ರಾ.ಸಾ.** | ಃ 10 |
| ವಾಸಸ್ಥಳ | ಃ ಮೈಸೂರು | **ಚಾ.ಸಾ.** | ಃ 33 |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

. ವಿ.ವಿ. ಪುರಂ ಪೊಲೀಸ್ ಠಾಣೆಯ ಪೊಲೀಸರು ನನ್ನನ್ನು ಮತ್ತು ಶಿವಕುಮಾರ ಇವರನ್ನು ಪಂಚನಾಮೆಗಾಗಿ ಕರೆಸಿದ್ದರು. ಸುಮಾರು 2-3 ವರ್ಷದ ಹಿಂದೆ ವಿ.ವಿ. ಪುರಂ ಪೊಲೀಸ್ ಠಾಣೆಗೆ ನನ್ನನ್ನು ಮತ್ತು ಶಿವಕುಮಾರ ಇವರನ್ನು ಕರೆಸಿದ್ದರು. ಠಾಣೆಗೆ ಹೋದ ನಂತರ ನಮ್ಮನ್ನು ಮಹಜರ್ ಗೆ ಹೋಗಬೇಕು ಎಂದು ತಿಳಿಸಿದರು, ಠಾಣೆಗೆ ನಾವು ಬೆಳಗ್ಗೆ 9.30 ಗಂಟೆಗೆ ಹೋಗಿದ್ದೆವು. ಪೊಲೀಸರ ಜೊತೆ 4-5 ಜನರು ಇದ್ದರು. ಮೊದಲು ಶ್ರೀರಂಗಪಟ್ಟಣಕ್ಕೆ ಹೋದೆವು ಅಲ್ಲಿ ಮೇನ್ ರೋಡಿನಲ್ಲಿ ವಾಹನ ನಿಲ್ಲಿಸಿದರು. ಅಲ್ಲಿ ಮೊಬೈಲ್ ಹುಡುಕಿದರು ಅಲ್ಲಿ ಯಾವುದೇ ಮೊಬೈಲ್ ಸಿಗಲಿಲ್ಲ. ಮೊಬೈಲ್ ಎಸೆದ ವ್ಯಕ್ತಿ ಮೊಬೈಲ್ ಹುಡುಕಿದರು, ಆದರೆ ಮೊಬೈಲ್ ಸಿಗಲಿಲ್ಲ ಅಲ್ಲಿ ಫೋಟೋ ತೆಗೆದಿರುತ್ತಾರೆ. ಫೊಟೋವನ್ನು ನಿ.ಪಿ.17 ಎಂದು ಗುರುತಿಸಲಾಯಿತು. ಸದರಿ ಫೋಟೋವಿನಲ್ಲಿ ನಾನು ಕೂಡ ಕಾಣುತ್ತೇನೆ. ಪಂಚನಾಮೆಗೆ ನಾನು ಠಾಣೆಗೆ ಸಹಿ ಮಾಡಿರುತ್ತೇನೆ, ಸದರಿ ಪಂಚನಾಮೆಯನ್ನು ನಿ.ಪಿ.18 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.18(ಎ)

ಎಂದು ಗುರುತಿಸಲಾಯಿತು. ಮತ್ತೊಂದು ಪಂಚನಾಮೆಯ ಮೆಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿ.ಪಿ.*19* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*19(ಎ)* ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಬೆಂಗಳೂರು-ಮೈಸೂರು ಮುಖ್ಯ ರಸ್ತೆಯಲ್ಲಿ ಮಂಡ್ಯಕ್ಕಿಂತ *5* ಕಿ.ಮೀ ಪೂರ್ವದಲ್ಲಿ ಪೊಲೀಸರು ಅಲ್ಲಿ ಮಹಜರ ಮೇಲೆ ಸಹಿ ಮಾಡಿರುವುದಿಲ್ಲ. ಮತ್ತೊಂದು ಫೊಟೋವನ್ನು ಸಾಕ್ಷಿಯು ನೋಡಿ ತಾನು ಸಹ ಆ ಫೋಟೋದಲ್ಲಿ ಕಾಣುತ್ತೇನೆ ಎಂದು ತಿಳಿಸಿದ್ದು ಸದರಿ ಫೋಟೋವನ್ನು ನಿ.ಪಿ.*20* ಎಂದು ಗುರುತಿಸಲಾಯಿತು. ಅಲ್ಲಿಂದ ಬನ್ನೂರು ರಸ್ತೆಗೆ ಹೋದೆವು. ಅಲ್ಲಿ ಕಾರು ನಿಲ್ಲಿಸಿದ ಜಾಗೆಯ ಇದೆ ಎಂದು ಫೊಟೋ ತೆಗೆದುಕೊಂಡಿರುತ್ತಾರೆ. ಸದರಿ ಫೋಟೋವನ್ನು ನೋಡಿ ಸಾಕ್ಷಿಯು ಗುರುತಿಸಿದ್ದು ಸದರಿ ಫೋಟೋವನ್ನು ನಿ.ಪಿ.*21* ಎಂದು ಗುರುತಿಸಲಾಯಿತು. ಅಲ್ಲಿ ಯಾವುದೇ ಬರವಣಿಗೆ ಮಾಡಿರುವುದಿಲ್ಲ, ನಾನು ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ, ಸದರಿ ಪಂಚನಾಮೆಯನ್ನು ನಿ.ಪಿ.*22* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*22(ಎ)* ಎಂದು ಗುರುತಿಸಲಾಯಿತು. ಆ ನಂತರ ಪೊಲೀಸರು ಬೇರೆ-ಬೇರೆ ಕಡೆ ಕರೆದುಕೊಂಡು ಹೋಗಿರುತ್ತಾರೆ. ಆದರೆ ಆ ಜಾಗೆಯ ಹೆಸರು ನನಗೆ ಗೊತ್ತಿರುವುದಿಲ್ಲ. ಆ ಜಾಗೆಯಲ್ಲಿ ಫೊಟೋಗಳನ್ನು ತೆಗೆದಿರುತ್ತಾರೆ. ಸದರಿ ಫೋಟೋಗಳನ್ನು ನೋಡಿ ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ನಿ.ಪಿ.*23* ರಿಂದ ನಿ.ಪಿ.*30* ಎಂದು ಗುರುತಿಸಲಾಯಿತು. ಅಮಾನತು ಪಂಚನಾಮೆಯ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ಅಮಾನತು ಪಂಚನಾಮೆಯನ್ನು ನಿ.ಪಿ.*31* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*31(ಎ)* ಎಂದು ಗುರುತಿಸಲಾಯಿತು. ಪಂಚನಾಮೆಯ ಮೇಲೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಮಚ್ಚುಗಳನ್ನು ತೆಗೆದುಕೊಂಡು ಅಲ್ಲಿ ಫೋಟೋಗಳನ್ನು ತೆಗೆದಿರುತ್ತಾರೆ.

ಮಚ್ಚುಗಳು ಎಷ್ಟು ಇದ್ದವು ಎಂದು ನಾನು ಎಣಿಸಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ *4* ಲಾಂಗು ಮಚ್ಚುಗಳನ್ನು ನೋಡಿ ಸಾಕ್ಷಿಯು ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ನಂತರ ಮಲೆ ಮಹದೇಶ್ವರ ಬೆಟ್ಟಕ್ಕೆ ಕರೆದುಕೊಂಡು ಹೋದರು. ಅದಕ್ಕಿಂತ ಮೊದಲು ಬಟ್ಟೆಗಳು ಇವೆ ಎಂದು ಮಹದೇಶ್ವರ ಬೆಟ್ಟಕ್ಕೆ ಒಂದು ಜಾಗೆಗೆ ಕರೆದುಕೊಂಡು ಹೋದರು. ಸಾಕ್ಷಿಯು ನ್ಯಾಯೂಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ. ಅಲ್ಲಿ ಪೊಲೀಸರು ಬಟ್ಟೆಗಳನ್ನು ತೆಗೆದುಕೊಂಡು ಫೋಟೋಗಳನ್ನು ತೆಗೆಸಿರುತ್ತಾರೆ. ಸದರಿ ಫೋಟೋಗಳನ್ನು ನೋಡಿ ಸಾಕ್ಷಿಯು ಗುರುತಿಸಿದ್ದು ಸದರಿ ಫೋಟೋಗಳನ್ನು ನಿ.ಪಿ.*32* ರಿಂದ ನಿ.ಪಿ.*49* ಎಂದು ಗುರುತಿಸಲಾಯಿತು. ಫೋಟೋಗಳಲ್ಲಿದ್ದ ವ್ಯಕ್ತಿಗಳನು ಈ ನ್ಯಾಯಾಲಯದ ಮುಂದೆ ಇರುವ ಆರೋಪಿತರಲ್ಲಿ ಯಾರು ಎಂದು ನನಗೆ ಗುರುತಿಸಲು ಆಗುವುದಿಲ್ಲ. ಸಾಕ್ಷಿ ಪಂಚನಾಮೆಯ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿ.ಪಿ.*50* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*51(ಎ)* ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಬಟ್ಟೆಗಳು ಸೀಲು ಮಾಡಿ ಅದರ ಮೇಲೆ ಪಂಚರ ಸಹಿ ಇರುವ ಚೀಟಿಯನ್ನು ನೋಡಿ ತನ್ನ ಸಹಿ ಇದೆ ಎಂದು ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಜಪ್ತಾದ ಆರೋಪಿತರ ಬಟ್ಟೆಗಳು ಮತ್ತು ಒಂದು ಬ್ಯಾಗನ್ನು ನೋಡಿ ಸಾಕ್ಷಿಯು ಗುರುತಿಸಿರುವುದಿಲ್ಲ. ಆದರೆ ಅವುಗಳ ಮೇಲೆ ಅಂಟಿಸಿದ ಚೀಟಿಯ ಮೇಲೆ ತನ್ನ ಸಹಿ ಇದೆ ಎಂದು ಹೇಳುತ್ತಾರೆ. ಸದರಿ ಚೀಟಿಗಳ ಮೇಲೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿಕೊಟ್ಟಿರುತ್ತೇನೆ, ನಂತರ ಮಹದೇಶ್ವರ ಬೆಟ್ಟದಲ್ಲಿರುವ ಲಾಡ್ಜ ಹತ್ತಿರ ಹೋಗಿದೆವು. ಅಲ್ಲಿ ರೂಮು ತೆಗೆದುಕೊಂಡು ಆರೋಪಿಗಳು ಬಾಡಿಗೆಗೆ ಇದ್ದಾರೆ ಎಂದು ಪೊಲೀಸರು ಬರೆದುಕೊಳ್ಳುತ್ತಿದ್ದರು. ಆರೋಪಿಗಳು ಬಾಡಿಗೆಗೆ ಇದ್ದ ರೂಮುಗಳ

ಫೋಟೋಗಳನ್ನು ತೆಗೆದಿರುತ್ತಾರೆ. ಸದರಿ ಫೊಟೋಗಳನ್ನು ನಿ.ಪಿ.*51* ಮತ್ತು *52* ಎಂದು ಗುರುತಿಸಲಾಯಿತು. ಮಹಜರನ್ನು ನಿ.ಪಿ.*53* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*53(ಎ)* ಎಂದು ಗುರುತಿಸಲಾಯಿತು. ಮಹಜರ್ ಮೇಲೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಇನ್ನೂ *3* ಫೊಟೋಗಳನ್ನು ನಿ.ಪಿ.*54* ರಿಂದ ನಿ.ಪಿ.*56* ಎಂದು ಗುರುತಿಸಲಾಯಿತು. ಲಾಡ್ಜನಲ್ಲಿ ಪೊಲೀಸರು ಏನೂ ಅಮಾನತುಪಡಿಸಿಕೊಂಡಿರುತ್ತಾರೆ ಎಂಬುದು ನಾನು ನೋಡಿರುವುದಿಲ್ಲ. ಮತ್ತೊಂದು ಅಮಾನತು ಮಹಜರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅಮಾನತು ಪಂಚಾನಾಮೆಯನ್ನು ನಿ.ಪಿ.*57* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*57(ಎ)* ಎಂದು ಗುರುತಿಸಲಾಯಿತು. ಅಲ್ಲಿ ಯಾವುದೇ ದೃಶ್ಯಾವಳಿಗಳನ್ನು ನಮಗೆ ತೋರಿಸಿರುವುದಿಲ್ಲ. ಸಿ.ಸಿ. ಟಿ.ವಿ.ಯ ಡಿಜಿಟಲ್ ವಿಡಿಯೋ ರೇಕಾರ್ಡರ್ ಅಮಾನತು ಪಡಿಸಿಕೊಂಡಿರುವುದನ್ನು ನಾನು ನೋಡಿರುವುದಿಲ್ಲ. ಮತ್ತೊಂದು ಅಮಾನತು ಮಹಜರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅಮಾನತು ಪಂಚಾನಾಮೆಯನ್ನು ನಿ.ಪಿ.*58* ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.*58(ಎ)* ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯಡಿಯಲ್ಲಿ ಮೊಬೈಲ್ ಜಪ್ತಿ ಮಾಡಿಕೊಂಡಿರುವುದನ್ನು ನಾನು ನೆಜೂಡಿರುವುದಿಲ್ಲ. ಸದರಿ ಪಂಚನಾಮೆಯ ಮೇಲೆ ಪೊಲೀಸ್ ಠಾಣೆಯ ಮೇಲೆ ಸಹಿ ಮಾಡಿರುತ್ತೇನೆ. ನಂತರ ಮಳವಳ್ಳಿ ನಗರದಲ್ಲಿರುವ ಮಧ್ಯದಂಗಡಿಗೆ ಪೊಲೀಸರು ಕರೆದುಕೊಂಡು ಹೋಗಿ ಅಲ್ಲಿ ಫೋಟೋಗಳನ್ನು ತೆಗೆದಿರುತ್ತಾರೆ. ಸದರಿ ಫೋಟೋಗಳನ್ನು ನಿ.ಪಿ.*59* ಮತ್ತು ನಿ.ಪಿ.*60* ಎಂದು ಗುರುತಿಸಲಾಯಿತು. ನಾನು ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

.ದಿನಾಂಕಃ ***27.12.2016*** ರಂದು ವಿ.ವಿ.ಪುರಂ ಪೊಲೀಸ್ ನವರು ನನ್ನನ್ನು ಮತ್ತು ಶಿವಕುಮಾರ ಈತನನ್ನು ಠಾಣೆಗೆ ಬರಮಾಡಿಕೊಂಡಿದ್ದರು ಎಂದರೆ ಸರಿ ಇದೆ. ಠಾಣೆಯಲ್ಲಿದ್ದ ***1*** ರಿಂದ ***5*** ನೇ ಆರೋಪಿತರನ್ನು ನಮಗೆ ತೋರಿಸಿದ್ದರು ಅವರು ಈ ದಿನ ನ್ಯಾಯಾಲಯದ ಮುಂದೆ ಇದ್ದಾರೆ ಎಂದರೆ ಎಂದು ಕೇಳಿದ್ದಕ್ಕೆ ಸಾಕ್ಷಿಯು ಆರೋಪಿತರನ್ನು ಈ ದಿನ ಆರೋಪಿತರನ್ನು ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ಆರೋಪಿಗಳನ್ನು ಗುರುತಿಸಲು ಆದರೂ ಕೂಡ ನಾನು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ***1*** ರಿಂದ ***5*** ಮತ್ತು ನಮ್ಮನ್ನು ಪೊಲೀಸರು ಜೀಪಿನಲ್ಲಿ ಕೂರಿಸಿಕೊಂಡು ಹೋದರು ಹೋಗುವಾಗ ಶ್ರೀರಂಗಪಟ್ಟಣದ ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆ ಬಳಿ ಬಂದಾಗ ***3*** ನೇ ಆರೋಪಿ ವಾಹನವನ್ನು ನಿಲ್ಲಿಸಲು ಹೇಳಿದನು. ವಾಹನವನ್ನು ನಿಲ್ಲಿಸಿ ಸೇತುವೆಯ ಕೆಳಗೆ ಆರೋಪಿತರು ನಮ್ಮನ್ನು ಕರೆದುಕೊಂಡು ಹೋಗಿ ನನ್ನ ಲಾವಾ ಮೊಬೈಲು ಮತ್ತು ಹೇಮಂತು ಕೊಟ್ಟ ಸ್ಯಾಮಸಂಗ್ ಮೊಬೈಲ್ ಇಲ್ಲೇ ಬಿಸಾಕಿದೆನು ಎಂದು ***3*** ನೇ ಆರೋಪಿಯು ಹೇಳಿದನು. ಅಲ್ಲಿ ಜಾಗೆ ಪರಿಶೀಲನೆ ಮಾಡಿದಾಗ ಅಲ್ಲಿ ಯಾವುದೇ ಮೊಬೈಲು ಸಿಕ್ಕಿರುವುದಿಲ್ಲ ಎಂದು ಸೂಚಿಸುವುದು ಸರಿ ಇದೆ. ಅಲ್ಲಿ ಬರೆದ ಮಹಜರಗೆ ನಿ.ಪಿ.***18*** ನಾನು ಸ್ಥಳದಲ್ಲಿ ಸಹಿ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಆ ನಂತರ ಅದೇ ಮಾರ್ಗಮಾಗಿ ಮಂಡ್ಯ-ಮೈಸೂರಿನ ಮುಖ್ಯ ರಸ್ತೆಯ ಇಂದುವಾಡು ಗ್ರಾಮದ ಬಳಿ ಹೋಗುತ್ತಿದ್ದಾಗ ಆರೋಪಿ ಮೂರ್ತಿ ಮತ್ತು ಧರ್ಮೇಂದ್ರ ವಾಹನವನ್ನು ನಿಲ್ಲಿಸಲು ತಿಳಿಸಿದರು, ವಾಹನವನ್ನು ನಿಲ್ಲಿಸಿ ರಸ್ತೆಯ ಪಕ್ಕದ ಜಾಗೆಯಲ್ಲಿ ಮೊಬೈಲ ಬಿಸಾಕಿದೆವು ಎಂದು ತಿಳಿಸಿದರು ಅದನ್ನು ಪರಿಶೀಲಿಸಿದಾಗ ಅಲ್ಲಿ ಯಾವುದೇ ಮೊಬೈಲುಗಳು ಸಿಕ್ಕಿರುವುದಿಲ್ಲ ಎಂದು ಸೂಚಿಸುವುದು ಸರಿ ಇದೆ. ಅಲ್ಲಿ ಪೊಲೀಸರು ನಿ.ಪಿ.*19* ರಂತೆ ಪಂಚನಾಮೆ ಮಾಡಿ ಪಂಚನಾಮೆಯ ಮೇಲೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಂತರ ಮಂಡ್ಯ ಮಾರ್ಗವಾಗಿ ಮಳವಳ್ಳಿ ಹೋಗುವ ರಸ್ತೆಯಲ್ಲಿ ಆರೋಪಿ ಸಂದೇಶ ವಾಹನವನ್ನು ನಿಲ್ಲಿಸಲು ತಿಳಿಸಿದೆನು. ನಾನು ಕೃತ್ಯಕ್ಕೆ ಬಳಸಿದ ಕಾರನ್ನು ಇಲ್ಲೇ ನಿಲ್ಲಿಸಿದೆವು ಎಂದು ಹೇಳಿದರು ಎಂದು ಸೂಚಿಸುವುದು ಸರಿ ಇದೆ. ಅಲ್ಲಿ ಸಹ ಪೊಲೀಸರು ಪಂಚನಾಮೆ ಮಾಡಿ ನಿ.ಪಿ.*22* ರ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

ನಂತರ ಮಳವಳ್ಳಿ ರಸ್ತೆಯ ಮೂಲಕ ಸತ್ತೇಗಾಲ ಕಡೆ ಹೋಗುವಾಗ ಕಾವೇರಿ ನದಿಗೆ ಕಟ್ಟಿರುವ ಹೊಸ ಬ್ರಿಡ್ಜ ಬಳಿ ಬಂದಾಗ ಆರೋಪಿ ಸಂದೇಶ ಈತನು ವಾಹನವನ್ನು ನಿಲ್ಲಿಸಲು ತಿಳಿಸಿದೆನು. ವಾಹನ ಇಳಿದು ಬ್ರಿಡ್ಜ ಕೆಳಭಾಗಕ್ಕೆ ಹೋಗಿ ಅಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ *4* ಲಾಂಗು ಮಚ್ಚುಗಳನ್ನು ಬಚ್ಚಿಟ್ಟಿದ್ದನು ತೆಗೆದು ಹಾಜರುಪಡಿಸಿದ್ದು ಆ ಚೀಲವನ್ನು ತೆಗೆದು ನೋಡಿದಾಗ ಆ ಚೀಲದಲ್ಲಿ ಒಟ್ಟು *4* ಲಾಂಗು ಮಚ್ಚುಗಳು ಇದ್ದವು ಆಗ *1* ನೇ ಆರೋಪಿ ಹೇಮಂತ್ ತಾನು ಬಳಸಿದ ಕಬ್ಬಿಣದ ಲಾಂಗು ಮಚ್ಚು ಎಂದು ಹೇಳಿ ಗುರುತಿಸಿ ಹಾಜರುಪಡಿಸಿದ್ದು ಅದನ್ನು ಪೊಲೀಸರು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಸೀಲು ಮಾಡಿ ವಸ್ತು ಸಂಖ್ಯೆ *1* ಎಂದು ಗುರುತು ಮಾಡಲಾಯಿತು ಎಂದು ಸೂಚಿಸುವುದು ಸರಿ ಇದೆ.

ಅದೇ ರೀತಿ ಆರೋಪಿ ಸಂದೇಶ್ ಈತನು ತಾನು ಬಳಸಿದ ಕಬ್ಬಿಣದ ಲಾಂಗು ಮಚ್ಚು ಎಂದು ಹೇಳಿ ಗುರುತಿಸಿ ಹಾಜರುಪಡಿಸಿದ್ದು ಅದನ್ನು ನೋಡಿದಾಗ ಅದರ ಮೇಲೆ ರಕ್ತದ ಕಲೆಗಳು ಇದ್ದವು ಅದನ್ನು ಪೊಲೀಸರು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಸೀಲು ಮಾಡಿ ವಸ್ತು ಸಂಖ್ಯೆ *2* ಎಂದು ಗುರುತು ಮಾಡಲಾಯಿತು ಎಂದು ಸೂಚಿಸುವುದು ಸರಿ ಇದೆ.

ಅದೇ ರೀತಿ ಆರೋಪಿ ಮೂರ್ತಿ ಈತನು ತಾನು ಬಳಸಿದ ಕಬ್ಬಿಣದ ಲಾಂಗು ಮಚ್ಚು ಎಂದು ಹೇಳಿ ಗುರುತಿಸಿ ಹಾಜರುಪಡಿಸಿದ್ದು ಅದನ್ನು ನೋಡಿದಾಗ ಅದರ ಮೇಲೆ ರಕ್ತದ ಕಲೆಗಳು ಇದ್ದವು ಅದನ್ನು ಪೊಲೀಸರು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಸೀಲು ಮಾಡಿ ವಸ್ತು ಸಂಖ್ಯೆ *3* ಎಂದು ಗುರುತು ಮಾಡಲಾಯಿತು ಎಂದು ಸೂಚಿಸುವುದು ಸರಿ ಇದೆ.

ಅದೇ ರೀತಿ ಆರೋಪಿ ಧರ್ಮೇಂದ್ರ ಈತನು ತಾನು ಬಳಸಿದ ಕಬ್ಬಿಣದ ಲಾಂಗು ಮಚ್ಚು ಎಂದು ಹೇಳಿ ಗುರುತಿಸಿ ಹಾಜರುಪಡಿಸಿದ್ದು ಅದನ್ನು ನೋಡಿದಾಗ ಅದರ ಮೇಲೆ ರಕ್ತದ ಕಲೆಗಳು ಇದ್ದವು ಅದನ್ನು ಪೊಲೀಸರು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಸೀಲು ಮಾಡಿ ವಸ್ತು ಸಂಖ್ಯೆ *4* ಎಂದು ಗುರುತು ಮಾಡಲಾಯಿತು ಎಂದು ಸೂಚಿಸುವುದು ಸರಿ ಇದೆ. ಈಗ ನ್ಯಾಯಾಲಯದ ಮುಂದೆ ನನಗೆ ತೋರಿಸಿದ ಮಚ್ಚುಗಳು ಆರೋಪಿತರಿಂದ ಜಪ್ತಿ ಮಾಡಿದ ಮಚ್ಚುಗಳು ಇವೆ ಎಂದು ಕೇಳಿದ್ದಕ್ಕೆ ಸಾಕ್ಷಿ ನನಗೆ ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ನನಗೆ ಮಚ್ಚುಗಳನ್ನು ಗುರುತಿಸಲು ಸಾಧ್ಯವಾದರೂ ನಾನು ಆರೋಪಿಗಳಿಗೆ ಸಹಾಯ ಮಾಡಲು ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನಿ.ಪಿ.*31* ರಂತೆ ಅಮಾನತು ಪಂಚನಾಮೆ ಮಾಡಿ ಮಚ್ಚುಗಳನ್ನು ಅಮಾನತುಪಡಿಸಿಕೊಂಡರು ಎಂದು ಸೂಚಿಸುವುದು ಸರಿ ಇದೆ.

ಆ ನಂತರ ಅಲ್ಲಿಂದ ನಮ್ಮನ್ನು ಮಲೆ ಮಹದೇಶ್ವರ ಬೆಟ್ಟಕ್ಕೆ ಕರೆದುಕೊಂಡು ಹೋದರು. ಅಲ್ಲಿ ಮಹದೇಶ್ವರ ಬೆಟ್ಟದ ಬಸ್ ನಿಲ್ದಾಣದ ಹತ್ತಿರ ಇರುವ ತೋಟಗಾರಿಕೆ ಇಲಾಖೆಗೆ ಸೇರಿದ ಬಾವಿಯ ಬಳಿ ಆರೋಪಿತರು ನಮ್ಮನ್ನು ಮತ್ತು ಪೊಲೀಸರನ್ನು ಕರೆದುಕೊಂಡು ಹೋಗಿ ಅದರಲ್ಲಿ ಆರೋಪಿ ಮೂರ್ತಿ ಈತನು ಪೊದೆಯಲ್ಲಿ ಬಿದ್ದ ಒಂದು ಹಸಿರು ಬಣ್ಣದ ಬ್ಯಾಗನ್ನು ತೆಗೆದುಕೊಂಡು ಬಂದು ಹಾಜರುಪಡಿಸಿ ಅದರಲ್ಲಿ ನಾವು ಕೃಷ್ಣ ಈತನನ್ನು ಕೊಲೆ ಮಾಡುವಾಗ ಧರಿಸಿದ್ದ ಬಟ್ಟೆಗಳು ಇವೆ ಎಂದು ಹೇಳಿದನು. ಅವುಗಳನ್ನು ಬ್ಯಾಗಿನಿಂದ ತೆಗೆದು ಪಡಿಶೀಲಿಸಿದಾಗ ಆರೋಪಿ ಹೇಮಂತ ಈತನು ಒಂದು ಟ್ರಾಕ್ ಪ್ಯಾಂಟು, ಒಂದು ಆಕಾಶ್ ನೀಲಿ ಬಣ್ಣದ ಅರ್ಧ ತೋಳಿನ ಟೀ ಶರ್ಟ ಇದ್ದು ಅದರಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಇದ್ದವು. ನಂತರ ಇನ್ನೊಬ್ಬ ಆರೋಪಿ ಸ್ವಾಮ್ಸನ ಅಲಿಯಾಸ್ ಸಂಜು ತಾನು ಕೃತ್ಯ ನಡೆದ ಸಮಯದಲ್ಲಿ ಧರಿಸಿದ್ದ ಬಟ್ಟೆ ಎಂದು ಹೇಳಿ ಒಂದು ಜೀನ್ಸ ಪ್ಯಾಂಟು, ಒಂದು ಕಪ್ಪು ಬಣ್ಣದ ತೋಂಬು ತೋಳಿನ ಟೀ ಶರ್ಟ, ಒಂದು ಸ್ಯಾಂಡೋ ಬನಿಯಾನ್ ಹಾಜರುಪಡಿಸಿದ್ದು ಅವುಗಳ ಮೇಲೂ ಸಹ ರಕ್ತದ ಕಲೆಗಳು ಇದ್ದದ್ದು ಕಂಡು ಬಂದಿತ್ತು. ಇನ್ನೊಬ್ಬ ಆರೋಪಿ ಧರ್ಮೇಂದ್ರ ಈತನು ತಾನು ಧರಿಸಿದ ಒಂದು ನೀಲಿ ಪ್ಯಾಂಟು, ಒಂದು ಕಡು ನೀಲಿ ಬಣ್ಣದ ತೊಂಬು ತೋಳಿನ ಶರ್ಟ ಇದ್ದು ಅದರ ಮೇಲೂ ರಕ್ತದ ಕಲೆಗಳು ಇದ್ದವು. ಇನ್ನೊಬ್ಬ ಆರೋಪಿ ಸಂದೇಶ ಈತನು ತಾನು ಧರಿಸಿದ ಬಟ್ಟೆಗಳು ಎಂದು ಹೇಳಿ ಬಿಳಿ ಮತ್ತು ಕಪ್ಪು ಮಿಶ್ರಿತ ತುಂಬು ತೋಳಿನ ಶರ್ಟ, ಒಂದು ಗ್ರೇ ಕಲರ್ ನ ಶರ್ಟ ಹಾಜರುಪಡಿಸಿದ್ದು ಅದರ ಮೇಲೂ ರಕ್ತದ ಕಲೆಗಳು ಇದ್ದದ್ದು ಕಂಡು ಬಂದಿತು, ಇನ್ನೊಬ್ಬ ಆರೋಪಿ ಮೂರ್ತಿ ತಾನು ಧರಿಸಿದ ಬಟ್ಟೆಗಳು ಎಂದು ಹೇಳಿ ಒಂದು ಕಪ್ಪು ಬಣ್ಣದ ಟ್ರಾಕ್ ಪ್ಯಾಂಟು, ಒಂದು ಹಸಿರು ಬಣ್ಣದ ಅರ್ಧ ತೋಳಿನ ಟೀ ಶರ್ಟ ಹಾಜರುಪಡಿಸಿದ್ದು ಅದರ ಮೇಲೂ ರಕ್ತದ ಕಲೆಗಳು ಇದ್ದದ್ದು ಕಂಡು ಬಂದಿದ್ದು ಮೇಲೆ

ಹೇಳಿದ ಎಲ್ಲಾ ವಸ್ತುಗಳನ್ನು ಪ್ರತ್ಯೇಕವಾಗಿ ಬಟ್ಟೆ ಚೀಲದಲ್ಲಿ ಹಾಕಿ ಸೀಲು ಮಾಡಿ ನಮ್ಮ ಸಹಿಗಳನ್ನು ತೆಗೆದುಕೊಂಡು ಅದಕ್ಕೆ ಅಂಟಿಸಿದರು ಎಂದು ಸೂಚಿಸುವುದು ಸರಿಯಲ್ಲ. ನಾನು ಬರೆದ ಮಹಜರಗೆ ನಿ.ಪಿ.*50* ಕ್ಕೆ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ತೋರಿಸಿದ ಬಟ್ಟೆಗಳು ಮತ್ತು ಬ್ಯಾಗು ನಿ.ಪಿ.*50* ರಡಿಯಲ್ಲಿ ನನ್ನ ಸಮಕ್ಷಮ ಅಮಾನತುಪಡಿಸಿಕೊಂಡರು ಎಂದು ಸೂಚಿಸುವುದು ಸರಿ ಇದೆ.

ನಂತರ ಪೊಲೀಸರು ಭಾರತಿ ಲಾಡ್ಜಗೆ ಕರೆದುಕೊಂಡು ಹೋಗಿ ಇದೇ ಲಾಡ್ಜ ನಲ್ಲಿ ತಂಗಿದೆವು ಆರೋಪಿತರು ಹೇಳಿದರು ಎಂದು ಸೂಚಿಸುವುದು ಸರಿ ಇದೆ. ಸದರಿ ಲಾಡ್ಜ ನಲ್ಲಿ ಆರೋಪಿ ಸ್ಯಾಮಸನ್ ಈತನು ತಾನೇ ಸ್ವಾಗತ ಕೌಂಟರ್ ಬಳಿ ಹೋಗಿ ಮಂಜುನಾಥ ಇವರ ಹೆಸರಿನಲ್ಲಿ ನಾನೇ ಸಹಿ ಮಾಡಿದ್ದೇನೆ ಎಂದು ಹೇಳಿ ನೋಟು ಬುಕ್ಕನಲ್ಲಿರುವ ತಾನು ಮಾಡಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಪೊಲೀಸರು ನಮ್ಮ ಸಮಕ್ಷಮ ಅಮಾನತುಪಡಿಸಿಕೊಂಡರು ಎಂದು ಸೂಚಿಸುವುದು ಸರಿ ಇದೆ. ನ್ಯಾಯಾಲಯದ ಮುಂದೆ ಇರುವ ಲಾಡ್ಜನ ದಾಖಲಾತಿ ನೋಟು ಬುಕ್ಕನ್ನು ನೋಡಿ ಸಾಕ್ಷಿಯು ಗುರುತಿಸಿದ್ದು ಆ ದಿವಸ ಪೊಲೀಸರು ಸದರಿ ಲಾಡ್ಜನ ದಾಖಲಾತಿ ನೋಟು ಬುಕ್ಕನ್ನು ನಮ್ಮ ಸಮಕ್ಷಮ ಅಮಾನತುಪಡಿಸಿಕೊಂಡ ನೋಟು ಬುಕ್ಕ ಆಗಿರುತ್ತದೆ ಎಂದು ಹೇಳುತ್ತಾರೆ. ಲಾಡ್ಜನ ದಾಖಲಾತಿ ನೋಟ್ ಬುಕ್ಕನ್ನು ನಿ.ಪಿ.*61* ಎಂದು ಗುರುತಿಸಲಾಯಿತು. ನಂತರ ಲಾಡ್ಜನ ಮ್ಯಾನೇಜರ್ ಅವರು ಹಾಜರುಪಡಿಸಿದ ಡಿಜಿಟಲ್ ವಿಡಿಯೋ ರೇಕಾರ್ಡಿಂಗ್ ಪಂಚನಾಮೆ ಮಾಡಿ ಅಮಾನತುಪಡಿಸಿಕೊಂಡರು ಎಂದು ಸೂಚಿಸುವುದು ಸರಿಯಲ್ಲ. ಡಿ.ವಿ.ಆರ್. ಮೇಲೆ ಅಂಟಿಸಿದ ಚೀಟಿಯ ಮೇಲೆ ಸಾಕ್ಷಿಯ ಸಹಿ ಇದೆ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳುತ್ತಾರೆ.

ಡಿ.ವಿ.ಆರ್. ಅಮಾನತುಪಡಿಸಿಕೊಂಡರು ಅಮಾನತುಪಡಿಸಿಕೊಂಡಿಲ್ಲ ಎಂದು ನಾನು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕಃ *09.01.2017* ರಂದು ಪೊಲೀಸ್ ಠಾಣೆಗೆ ನಮ್ಮನ್ನು ಕರೆಯಿಸಿ ಆರೋಪಿ ಭರತ ಈತನನ್ನು ತೋರಿಸಿ ಜೈಲಿನಲ್ಲಿರುವ ಮಂಜೇಶ ಈತನಿಗೆ ಫೋನ್ ಮಾಡುತ್ತಿದ್ದರು ಅವರ ಬಳಿ ಇರುವ ಮೊಬೈಲ್ ಮತ್ತು ಸಿಮ್ ಕಾರ್ಡನ್ನು ಅಮಾನತುಪಡಿಸಿಕೊಳ್ಳಬೇಕು ಎಂದು ಆರೋಪಿ ಭರತ ಈತನ ಕಡೆ ಇರುವ ಸ್ಯಾಮಸಂಗ್ ಮೊಬೈಲ್ ನಿ.ಪಿ.*58* ರಡಿಯಲ್ಲಿ ಪಂಚನಾಮೆ ಮಾಡಿ ಜಪ್ತಿ ಪಡಿಸಿಕೊಂಡರು ಎಂದು ಸೂಚಿಸುವುದು ಸರಿಯಲ್ಲ. ಸದರಿ ಮೊಬೈಲ್ ಗೆ ಟಾಟಾ ಡೋಕೋಮಾ ಸಿಮ್ ಕೂಡ ಇತ್ತು ಎಂದು ಸೂಚಿಸುವುದು ಸರಿಯಲ್ಲ. ಈ ಸಂಬಂಧ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಹೇಳಿಕೆಗಳನ್ನು ನಿ.ಪಿ.*62* ಮತ್ತು ನಿ.ಪಿ.*63* ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿ *1* ರಿಂದ *5* ಮತ್ತು ಭರತ ಇವರನ್ನು ಗುರುತಿಸಲು ಸಾಧ್ಯವಿದ್ದರೂ ಕೂಡ ಅವರಿಗೆ ಸಹಾಯ ಮಾಡುವ ಉದ್ದೇಶಪೂರ್ವಕವಾಗಿ ಗುರುತಿಸಲು ಆಗುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಬಟ್ಟೆಗಳು ಹಾಗೂ ಬ್ಯಾಗನ್ನು ಮತ್ತು ಮಚ್ಚುಗಳನ್ನು ನನ್ನ ಸಮಕ್ಷಮ ಜಪ್ತಿ ಮಾಡಿದ್ದರೂ ಅವುಗಳನ್ನು ಗುರುತಿಸಲು ಸಾಧ್ಯವಿದ್ದರೂ ಸಹ ಗುರುತಿಸಲು ಸಾಧ್ಯವಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿ 1 ರಿಂದ 6 ಪರ ಟಿ.ಪಿ.ಡಿ. ವಕೀಲರಿಂದಃ-**

.ನಾನು ಮತ್ತು ಶಿವಕುಮಾರ ಒಂದೇ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ ಇದೆ. ನಾನು ಮತ್ತು ಶಿವಕುಮಾರ ಬೇರೆ-ಬೇರೆ ಕೇಸಿನಲ್ಲಿ ಅಂದರೆ 3 ಕೇಸಿನಲ್ಲಿ ಸಾಕ್ಷಿದಾರರಾಗಿದ್ದೇವೆ. ಆ

ದಿವಸ 3 ವಾಹನಗಲ್ಲಿ ನಾವು ಶ್ರೀರಂಗಪಟ್ಟಣ, ಮಳವಳ್ಳಿ, ಸತ್ತೇಗಾಲ ಮತ್ತು ಮಲೆ ಮಹದೇಶ್ವರ ಬೆಟ್ಟಕ್ಕೆ ಹೋಗಿರುತ್ತೇವೆ. ನಾನು ಪೊಲೀಸರ ವಾಹನದಲ್ಲಿ ಕುಳಿತಿದ್ದೆನು. ಪೊಲೀಸರು ನನ್ನ ಅಂಗಶೋಧನೆ ಮಾಡಿರುವುದಿಲ್ಲ ಮತ್ತು ಆರೋಪಿತರ ಅಂಗಶೋದನೆ ಮಾಡಿರುವುದಿಲ್ಲ ಹಾಗೂ ಪೊಲೀಸರು ನಮ್ಮ ಸಮಕ್ಷಮ ಅವರ ಅಂಗಶೋಧನೆ ಮಾಡಿರುವುದಿಲ್ಲ. ಆರೋಪಿತರು ನಮ್ಮ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಶ್ರೀರಂಗಪಟ್ಟಣ, ಮಳವಳ್ಳಿ, ಸತ್ತೇಗಾಲ ಮತ್ತು ಮಲೆ ಮಹದೇಶ್ವರ ಪೊಲೀಸರೇ ನಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ ಬೇರೆ ಯಾರು ದಿಕ್ಕನ್ನು ತೋರಿಸಿರುವುದಿಲ್ಲ. ಪೊಲೀಸರ ವಾಹನವೇ ಮುಂದೆ ಹೋಗುತ್ತಿತ್ತು ಬೇರೆ ವಾಹನ ಹಿಂದೆ ಹೋಗುತ್ತಿದ್ದವು, ಮಚ್ಚುಗಳನ್ನು ಯಾರು ಯಾವ ಮಚ್ಚುಗಳನ್ನು ಹಾಜರುಪಡಿಸಿದರು ಎಂದು ನನಗೆ ಹೇಳಲು ಆಗುವುದಿಲ್ಲ. ಯಾವ ಬಟ್ಟೆ ಯಾರು ಹಾಜರು ಮಾಡಿದರು ಎಂದು ನನಗೆ ಹೇಳಲು ಆಗುವುದಿಲ್ಲ, ನನ್ನ ಮುಂದೆ ಮಚ್ಚುಗಳಿಗಗಾಲೀ ಅಥವಾ ಬಟ್ಟೆಗಳಿಗಾಗಲೀ ಬಟ್ಟೆ ಕವರಿನಲ್ಲಿ ಹಾಕಿ ಸೀಲು ಮಾಡಿರುವುದಿಲ್ಲ. ಪೊಲೀಸರು ನಮ್ಮ ಮುಂದೆ ಆರೋಪಿತರ ಬೆರಳಚ್ಚು ತೆಗೆದುಕೊಂಡಿರುವುದಿಲ್ಲ. ಮಚ್ಚುಗಳ ಮೇಲೆ ಮತ್ತು ಬಟ್ಟೆಗಳ ಮೇಲೆ ಅಂಟಿಚಿದ ಚೀಟಿಗಳ ಮೇಲೆ ಸಹಿ ಪೊಲೀಸರು ಪೊಲೀಸ್ ಠಾಣೆಯಲ್ಲಿ ತೆಗೆದುಕೊಂಡಿರುತ್ತಾರೆ. ನಮಗೆ ಪೊಲೀಸರು ಯಾವುದೇ ಸ್ಯಾಂಪಲ್ ಸೀಲು ಕೊಟ್ಟಿರುವುದಿಲ್ಲ. ಪೊಲೀಸರು ನಮ್ಮ ಸಮಕ್ಷಮ ಲಾಡ್ಜನ ಬಿಲ್ಲುಗಳನ್ನು ಜಪ್ತಿ ಮಾಡಿರುವುದಿಲ್ಲ. ಪೊಲೀಸರು ಯಾರಿಂದ ಏನು ಅಮಾನತುಪಡಿಸಿಕೊಂಡರು ಯಾರು-ಯಾರು ಏನು ಹಾಜರುಪಡಿಸಿದರು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ

ಇದೆ. ಮೇಲೆ ಹೇಳಿದ ಪ್ರತಿಯೊಂದು ಮಹಜರನಲ್ಲಿ ಪೊಲೀಸರು ಏನು ಬರೆದಿರುತ್ತಾರೆ ಎಂದು ನನಗೆ ಓದಿ ಹೇಳಿರುವುದಿಲ್ಲ.

**ಪಾಟೀ ಸವಾಲು : ಆರೋಪಿ 7 ಪರ ಜಿ.ವಿ.ಆರ್, ವಕೀಲರಿಂದಃ-**

.ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ.

**ಪಾಟೀ ಸವಾಲು : ಆರೋಪಿ 8, 10, 11 ಮತ್ತು 12 ರ ಪರ ಜಿ.ಎಂ.ಎನ್. ವಕೀಲರಿಂದಃ-**

.ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ.

**ಪಾಟೀ ಸವಾಲು : ಆರೋಪಿ 9 ಪರ ಯು.ಎಸ್. ವಕೀಲರಿಂದಃ-**

.ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇನೆ.

***ಮರು ವಿಚಾರಣೆಃ- ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*